# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 148 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು; ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಹಾಸ್ಟೆಲ್ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1243 ಮೆಟ್ರಿಕ್ ಪೂರ್ವ (963 ಬಾಲಕರು+280 ಬಾಲಕಿಯರು) ಹಾಗೂ 1469 ಮೆಟ್ರಿಕ್ ನಂತರದ (690 ಬಾಲಕರು+779 ಬಾಲಕಿಯರು) ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 2712 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. |
| ಆ) | ಹಿಂದುಳಿದ ವರ್ಗಗಳ ಎಲ್ಲಾ ಹಾಸ್ಟೆಲ್‌ಗಳಿಗೆ ವಾರ್ಡನ್, ಅಡಿಗೆಯವರು ಮತ್ತು ವಾಚ್‌ಮೆನ್‌ಗಳ ನೇಮಕವಾಗಿದೆಯೇ;<br>ನೇಮಕವಾಗಿದ್ದಲ್ಲಿ, ಅವರ ವೇತನ ಶ್ರೇಣಿ ಎಷ್ಟು;(ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 2712 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂರಾತಿ ಸಂಖ್ಯಾಬಲಕ್ಕೆ ಅನುಗುಣವಾಗಿ ನಿಲಯ ಮೇಲ್ವಿಚಾರಕರು/ ನಿಲಯ ಪಾಲಕರು, ಅಡುಗೆಯವರು, ಅಡುಗೆ ಸಹಾಯಕರು ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ರಾತ್ರಿಕಾವಲುಗಾರರ ಹುದ್ದೆಗಳು ಮಂಜೂರಾಗಿರುತ್ತದೆ.<br><br>ಹುದ್ದೆಗಳ ವಿವರ, ವೇತನ ಶ್ರೇಣಿ ಹಾಗೂ ನೇಮಕಾತಿ ಕುರಿತ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ. |
| ಇ) | ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ರಾತ್ರಿ ಸಮಯದಲ್ಲಿ ಹೇಗೆ ವರ್ತಿಸುತ್ತಾರೆಂದು ಮಾಹಿತಿ ತಿಳಿಯಲು ಇರುವ ವ್ಯವಸ್ಥೆಗಳೇನು; ಎಲ್ಲಾ ಹಾಸ್ಟೆಲ್‌ಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ಮೇಲುಸ್ತುವಾರಿಗಾಗಿ ನಿಲಯ ಮೇಲ್ವಿಚಾರಕರು/ ನಿಲಯ ಪಾಲಕರು ಹುದ್ದೆ ಮಂಜೂರಾಗಿದ್ದು ಅವರು ವಿದ್ಯಾರ್ಥಿನಿಲಯದ ಸಂಪೂರ್ಣ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ. |

| | | |
|---|---|---|
| | | ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ರಾತ್ರಿ ವೇಳೆ ಸುರಕ್ಷತೆಗಾಗಿ ರಾತ್ರಿ ಕಾವಲುಗಾರರನ್ನು ನೇಮಿಸಲಾಗಿರುತ್ತದೆ.<br><br>ಮುಂದುವರೆದು, ವಿದ್ಯಾರ್ಥಿನಿಲಯಗಳ ಸುರಕ್ಷತೆಯ ದೃಷ್ಟಿಯಿಂದ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 2190 ವಿದ್ಯಾರ್ಥಿನಿಲಯಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ಉಳಿದ 522 ವಿದ್ಯಾರ್ಥಿನಿಲಯಗಳಿಗೆ ಅನುದಾನದ ಲಭ್ಯತೆಯನುಸಾರ ಅಳವಡಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ಈ ಹಾಸ್ಟೆಲ್‌ಗಳ ಒಟ್ಟಾರೆ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಿ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುವ ವ್ಯವಸ್ಥೆಯಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಆಡಳಿತ ನಿರ್ವಹಣೆಯನ್ನು ಸಂಪೂರ್ಣವಾಗಿ ಗಣಕೀಕೃತ ಆಡಳಿತ ವ್ಯವಸ್ಥೆಯ ಮೂಲಕ ನಿರ್ವಹಿಸಲು ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್‌ರವರಿಂದ "ನಿಲಯ" ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.<br><br>ಸದರಿ ತಂತ್ರಾಂಶದಲ್ಲಿ ವಿದ್ಯಾರ್ಥಿನಿಲಯಗಳ ಆಹಾರ ಸಾಮಗ್ರಿಗಳ ಬೇಡಿಕೆ ಪಟ್ಟಿ ಸಲ್ಲಿಸುವುದು, ಸ್ಟಾಕ್ ಮತ್ತು ವಿತರಣೆಯ ನಿರ್ವಹಣೆ, ಪ್ರತಿ ದಿನ ವಿದ್ಯಾರ್ಥಿಗಳಿಗೆ ಮೆನುಚಾರ್ಟ್ ಅನುಸಾರ ನೀಡಲಾಗುವ ಭೋಜನದ ಪೋಟೋಗಳನ್ನು ಅಪ್‌ಲೋಡ್ ಮಾಡಲಾಗುವುದು ಜೊತೆಗೆ ವಿದ್ಯಾರ್ಥಿನಿಲಯಗಳ ಮೂಲಭೂತ ಸೌಲಭ್ಯಗಳ ನಿರ್ವಹಣೆ ಮತ್ತು ಸಿಬ್ಬಂದಿಯ ನಿರ್ವಹಣೆ ಸಹ ಮಾಡಲಾಗುತ್ತಿದೆ. |

ಸಂಖ್ಯೆ:ಹಿಂವಕ **594** ಬಿಎಂಎಸ್ **2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1488, ಅನುಬಂಧ-1

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ

| ಕ್ರ.ಸಂ | ಜಿಲ್ಲೆ ಹೆಸರು | ಬಾಲಕರ ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಒಟ್ಟು ವಿದ್ಯಾರ್ಥಿನಿಲಯಗಳು | ಒಟ್ಟು ಮಂಜೂರಾತಿ ಸಂಖ್ಯೆ |
|---|---|---|---|---|---|---|---|
| 1 | ಬಾಗಲಕೋಟೆ | 59 | 5564 | 33 | 4064 | 92 | 9628 |
| 2 | ಬಳ್ಳಾರಿ | 37 | 4016 | 18 | 1960 | 55 | 5976 |
| 3 | ಬೆಳಗಾವಿ | 122 | 9464 | 49 | 5731 | 171 | 15195 |
| 4 | ಬೆಂಗಳೂರು ಗ್ರಾಮಾಂತರ | 23 | 1710 | 12 | 1109 | 35 | 2819 |
| 5 | ಬೆಂಗಳೂರು ನಗರ | 41 | 5254 | 40 | 5293 | 81 | 10547 |
| 6 | ಬೀದರ | 55 | 4921 | 23 | 2346 | 78 | 7267 |
| 7 | ಚಾಮರಾಜನಗರ | 19 | 1469 | 15 | 1589 | 34 | 3058 |
| 8 | ಚಿಕ್ಕಬಳ್ಳಾಪುರ | 41 | 3314 | 21 | 2449 | 62 | 5763 |
| 9 | ಚಿಕ್ಕಮಗಳೂರು | 53 | 3739 | 50 | 5517 | 103 | 9256 |
| 10 | ಚಿತ್ರದುರ್ಗ | 68 | 5987 | 41 | 4512 | 109 | 10499 |
| 11 | ದಕ್ಷಿಣ ಕನ್ನಡ | 37 | 3614 | 47 | 5417 | 84 | 9031 |
| 12 | ದಾವಣಗೆರೆ | 51 | 4892 | 40 | 4565 | 91 | 9457 |
| 13 | ಧಾರವಾಡ | 53 | 5575 | 45 | 5245 | 98 | 10820 |
| 14 | ಗದಗ | 40 | 3460 | 28 | 3135 | 68 | 6595 |
| 15 | ಹಾಸನ | 77 | 6314 | 43 | 4907 | 120 | 11221 |
| 16 | ಹಾವೇರಿ | 54 | 4176 | 31 | 3437 | 85 | 7613 |
| 17 | ಕಲಬುರಗಿ | 92 | 7464 | 46 | 4760 | 138 | 12224 |
| 18 | ಕೊಡಗು | 24 | 1560 | 18 | 1645 | 42 | 3205 |
| 19 | ಕೋಲಾರ | 38 | 2891 | 23 | 2056 | 61 | 4947 |
| 20 | ಕೊಪ್ಪಳ | 53 | 4776 | 37 | 4168 | 90 | 8944 |
| 21 | ಮಂಡ್ಯ | 76 | 6299 | 40 | 3912 | 116 | 10211 |
| 22 | ಮೈಸೂರು | 75 | 6939 | 41 | 4981 | 116 | 11920 |
| 23 | ರಾಯಚೂರು | 48 | 4107 | 26 | 3021 | 74 | 7128 |
| 24 | ರಾಮನಗರ | 34 | 2499 | 19 | 1740 | 53 | 4239 |
| 25 | ಶಿವಮೊಗ್ಗ | 71 | 6463 | 70 | 8258 | 141 | 14721 |
| 26 | ತುಮಕೂರು | 77 | 5996 | 46 | 5315 | 123 | 11311 |
| 27 | ಉಡುಪಿ | 22 | 2057 | 25 | 3027 | 47 | 5084 |
| 28 | ಉತ್ತರಕನ್ನಡ | 60 | 4205 | 45 | 4371 | 105 | 8576 |
| 29 | ವಿಜಯನಗರ | 42 | 4219 | 26 | 2691 | 68 | 6910 |
| 30 | ವಿಜಯಪುರ | 67 | 5076 | 38 | 4147 | 105 | 9223 |
| 31 | ಯಾದಗಿರಿ | 44 | 3261 | 23 | 2042 | 67 | 5303 |
| | ಒಟ್ಟು | 1653 | 141281 | 1059 | 117410 | 2712 | 258691 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 148ಕ್ಕೆ ಅನುಬಂಧ-2**

| ಕ್ರ.ಸಂ | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ವಿವರ | | | ಷರಾ |
|---|---|---|---|---|---|
| | | ಮಂಜೂರು | ಭರ್ತಿ | ಖಾಲಿ | |
| 1. | ನಿಲಯ ಪಾಲಕರು (ಪುರುಷ) (ರೂ.61300-112900) | 300 | 300 | - | |
| 2. | ನಿಲಯ ಪಾಲಕರು (ಮಹಿಳೆ) (ರೂ.61300-112900) | 169 | 169 | - | |
| 3. | ನಿಲಯ ಮೇಲ್ವಿಚಾರಕರು (ಪುರುಷ) (ರೂ.44425-83700) | 1353 | 467 | 886 | ಖಾಲಿ ಇರುವ ಹುದ್ದೆಗಳ ಪೈಕಿ 274 ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:18.06.2026ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 4. | ನಿಲಯ ಮೇಲ್ವಿಚಾರಕರು (ಮಹಿಳೆ) (ರೂ.44425-83700) | 890 | 467 | 423 | ಖಾಲಿ ಇರುವ ಹುದ್ದೆಗಳ ಪೈಕಿ 112 ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:23.06.2026ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 5. | ಅಡುಗೆಯವರು (ಪುರುಷ) (ರೂ.29600-52800) | 3342 | 1985 | 1357 | ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲ ಏಜನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. |
| 6. | ಅಡುಗೆಯವರು (ಮಹಿಳೆ) (ರೂ.29600-52800) | 2409 | 1717 | 692 | ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲ ಏಜನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. |
| 7. | ಅಡುಗೆ ಸಹಾಯಕರು (ಪುರುಷ) (ರೂ.27000-46675) | 3085 | 584 | 2501 | ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲ ಏಜನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. |
| 8. | ಅಡುಗೆ ಸಹಾಯಕರು (ಮಹಿಳೆ) (ರೂ.27000-46675) | 2388 | 364 | 2024 | ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲ ಏಜನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. |
| 9. | ಕಾವಲುಗಾರರು (ರೂ.27000-46675) | 1073 | 17 | 1056 | ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲ ಏಜನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ. |

ನಿರ್ದೇಶಕರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು